ಬಿಡುಗಡೆ ಮಾಡಲಾಗಿದೆ.

ಶ್ರೀ ಎನ್. ಚಿಕ್ಕೇಗೌಡ.—ಕಳೆದ ವರ್ಷ 1982–83ರಲ್ಲಿ ಹಿಂದಿನ ಸರ್ಕಾರ 728 ಮನೆಗಳನ್ನು ಹೊಸಕೋಟೆ ತಾಲ್ಲೂಕಿಗೆ ಮಂಜೂರು ಮಾಡಲಾಗಿದ್ದು ಆ ಮನೆಗಳನ್ನು ಕಟ್ಟಲು ಆದಷ್ಟು ಜಾಗ್ರತೆ ಹಣವನ್ನು ಕೊಡುತ್ತೇವೆಂದು ಹಿಂದೆ ಮಾನ್ಯ ಮಂತ್ರಿಗಳು ಭರವಸೆಯನ್ನು ಕೊಟ್ಟಿದ್ದಾರೆ. ಈಗ ಮಳೆಗಾಲ ಶುರುವಾಗಿದೆ. ಪಾಯ, ಗೋಡೆ ಹಾಕಿಕೊಂಡು ಮೇಲ್ಛಾವಣಿ ಇಲ್ಲದೇ ಅನೇಕ ಬಡಜನರು ಕಾಯುತ್ತಿದ್ದಾರೆ. ತಾವು ಹಣ ಬೇಗ ಒದಗಿಸುತ್ತೇವೆಂದು ಭರವಸೆಯನ್ನು ಕೂಡ ಕೊಟ್ಟಿದ್ದೀರಿ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ. ಈ ಪ್ರಶ್ನೆಗೆ ಸಂಬಂಧಪಟ್ಟ ಹಾಗೆ ಮಾನ್ಯ ಸದಸ್ಯರು ಹೋದಸಲ ಕೇಳಿದ್ದರು. ಆಗ ಸರ್ಕಾರದವರು ಒಂದು ಲಕ್ಷ ಎರಡು ಸಾವಿರ ಮನೆಗಳನ್ನು ಕಟ್ಟುತ್ತೇವೆಂದು ಘೋಷಣೆ ಮಾಡಿದ್ದರು. ಮತ್ತು ಮನೆಗಳನ್ನು ಕಟ್ಟುವುದಕ್ಕೆ ಬೇಕಾದಂಥ ಹಣದ ಸೌಕರ್ಯಗಳನ್ನು ಆ ಸರ್ಕಾರದವರು ಒದಗಿಸಿಕೊಟ್ಟಿರಲಿಲ್ಲ ಮತ್ತು ಅದಕ್ಕೆ ಬೇಕಾದಂಥ ಹಣವನ್ನು ಸಹ ಇಟ್ಟಿರಲಿಲ್ಲ. ಆದ್ದರಿಂದ ನಾವು ಮನೆಗಳನ್ನು ಕಟ್ಟುವುದಕ್ಕೆ ಸಾಧ್ಯವಾಗಲಿಲ್ಲ. ಆದರೆ ನಾವು ಈ ವರ್ಷದ ಆಯವ್ಯಯ ಪಟ್ಟಿಯಲ್ಲಿ 11 ಕೋಟಿ 60 ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿ ಇಟ್ಟಿದ್ದೇವೆ. ಈ ಹಣದಲ್ಲಿ ನಾವು ಸುಮಾರು 58 ಸಾವಿರ ಮನೆಗಳ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಒಟ್ಟು ಕರ್ನಾಟಕ ರಾಜ್ಯಾದ್ಯಂತ—1982–83ನೇ ಸಾಲಿನಲ್ಲಿ ಸುಮಾರು 231 ಮನೆಗಳನ್ನು ಕಟ್ಟುವ ಯೋಜನೆಯನ್ನು ಹಾಕಿಕೊಂಡಿದ್ದೇವೆ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ವಿಷಯ : ತುಮಕೂರು ಜಿಲ್ಲೆಯ ಗುಬ್ಬಿ, ಸಿರಾ ಹಾಗೂ ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳಲ್ಲಿ ಅಂಗನವಾಡಿ ಯೋಜನೆಯ ಮಂಜೂರಾತಿಯ ಬಗ್ಗೆ

ಪ್ರ. ೧ (೨) ಶ್ರೀ ಬಿ. ಗಂಗಣ್ಣ (ಕಲ್ಲಂಬೆಳ್ಳ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

(ಅ) ತುಮಕೂರು ಜಿಲ್ಲೆಯ ಗುಬ್ಬಿ, ಚಿಕ್ಕನಾಯಕನಹಳ್ಳಿ ಹಾಗೂ ಸಿರಾ ತಾಲ್ಲೂಕುಗಳಿಗೆ ಅಂಗನವಾಡಿ ಯೋಜನೆಯನ್ನು ಮಂಜೂರು ಮಾಡುವ ಬಗ್ಗೆ ಸಲಹೆಯೇನಾದರೂ ಸರ್ಕಾರದವರಲ್ಲಿದೆಯೆ ;

(ಆ) ಹಾಗಿದ್ದಲ್ಲಿ ಸರ್ಕಾರದವರು ಯೋಜನೆಯನ್ನು ಪ್ರಸಕ್ತ ಸಾಲಿನಲ್ಲಿಯೇ (1983–84) ಮಂಜೂರು ಮಾಡುವರೆ ?

ಉತ್ತರ ಶ್ರೀಮತಿ ಚಂದ್ರಪ್ರಭಾ ಅರಸ್ (ಸಮಾಜ ಕಲ್ಯಾಣ ಹಾಗೂ ರೇಷ್ಮೆ ಮಂತ್ರಿಗಳು).—

(ಅ) ಹೌದು—ಸಿರಾ ಮತ್ತು ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆಯ ಬಗ್ಗೆ, ಮಂಜೂರಾತಿಯನ್ನು ಪಡೆಯಲು ಭಾರತ ಸರ್ಕಾರಕ್ಕೆ ಕಳುಹಿಸಲಾಗಿದೆ. ಚಿಕ್ಕನಾಯಕನ ಹಳ್ಳಿಯನ್ನು ಮಂಜೂರು ಮಾಡುವ ಬಗ್ಗೆ ಪ್ರಸ್ತಾವನೆ ಇಲ್ಲ.

(ಆ) ಗುಬ್ಬಿಯಲ್ಲಿ 1983–84ರಲ್ಲು ಮತ್ತು ಶಿರಾದಲ್ಲಿ 1985–86ರಲ್ಲು ಮಂಜೂರು ಮಾಡುವ ಬಗ್ಗೆ ಪ್ರಸ್ತಾಪಿತ ಮಾಡಲಾಗಿದೆ.

ವಿಷಯ : ಕರ್ನಾಟಕ ಸರ್ಕಾರವು ತಮಿಳುನಾಡಿನ ಮಾದರಿಯಂತೆ ಸಂಸ್ಥೆಯ ಕಾರ್ಯಕಾರಿ ಮತ್ತು ಲಾಭದ ಹಿತದೃಷ್ಟಿಯಿಂದ ಪ್ರತ್ಯೇಕ ಸ್ವಾಯುಕ್ತ ಸಂಸ್ಥೆಗಳನ್ನಾಗಿ ವಿಭಜಿಸುವ ಬಗ್ಗೆ

ಪ್ರಶ್ನೆ 8(14) ಶ್ರೀ ಗೋವಿಂದ ಪಿ. ಒಡೆಯರಾಜ್ (ಕಮಲಾಪುರ).—ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಕರ್ನಾಟಕ ಸರ್ಕಾರವು ತಮಿಳುನಾಡಿನ ಮಾದರಿಯಂತೆ ಸಂಸ್ಥೆಯ ಕಾರ್ಯಕಾರಿ ಮತ್ತು ಲಾಭದ ಹಿತ ದೃಷ್ಟಿಯಿಂದ ಪ್ರತ್ಯೇಕ ಸ್ವಾಯುತ್ತ ಸಂಸ್ಥೆಗಳನ್ನಾಗಿ ವಿಭಜಿಸುವ ಬಗ್ಗೆ ನಿರ್ಧಾರವನ್ನು ತೆಗೆದುಕೊಂಡಿರುವುದೆ ;

(ಆ) ಹಾಗಿದ್ದಲ್ಲಿ ನಿರ್ಧಾರವನ್ನು ಕಾರ್ಯರೂಪಕ್ಕೆ ತರಲಾಗಿದೆಯೇ ;

(ಇ)—ಇಲ್ಲದಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದ ನೀತಿಗಳಿಗೆ ಕಾರಣಗಳೇನು ?